No:Compt/Uplok/BCD-574/2017/ARLO-1

## ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ–574/2017/ಎ.ಆರ್.ಎಲ್.ಒ–1. ದಿನಾಂಕ:04–05–2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:**– (1) ಶ್ರೀ ಶೇಷಾದ್ರಿ, ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಪಿ., ಬೆಂಗಳೂರು, (2) ಶ್ರೀ ಪ್ರಕಾಶ್ ಎಂ. ದಾರೇಶ್ವರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ಮತ್ತು (3) ಶ್ರೀ ವೆಂಕಟೇಶ್, ಸಹಾಯಕ ಅಭಿಯಂತರರು, ವಾರ್ಡ್ ನಂ:41, ಪೀಣ್ಯ ಕೈಗಾರಿಕಾ ವಿಭಾಗ, ಬಿಬಿಎಂಪಿ., ಬೆಂಗಳೂರು ರವರು ದುರ್ನಡತೆ ಎಸಗಿರುವ ಬಗ್ಗೆ.

******

ಶ್ರೀ ಪ್ರಗತಿ ಕೆ. ವೆಂಕಟೇಶ್ ಬಾಬು, ನಂ:147, 2ನೇ ಮುಖ್ಯ, 3ನೇ ಅಡ್ಡ ರಸ್ತೆ, ಚಾಮರಾಜಪೇಟೆ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ (1) ಶ್ರೀ ಶೇಷಾದ್ರಿ, ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಪಿ., ಬೆಂಗಳೂರು, (2) ಶ್ರೀ ಪ್ರಕಾಶ್ ಎಂ. ದಾರೇಶ್ವರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ಮತ್ತು (3) ಶ್ರೀ ವೆಂಕಟೇಶ್, ಸಹಾಯಕ ಅಭಿಯಂತರರು, ವಾರ್ಡ್ ನಂ:41, ಪೀಣ್ಯ ಕೈಗಾರಿಕಾ ವಿಭಾಗ, ಬಿಬಿಎಂಪಿ., ಬೆಂಗಳೂರು ರವರ (ಇನ್ನು ಮುಂದೆ '1 ರಿಂದ 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಕರ್ತವ್ಯದಲ್ಲಿ ದುರ್ನಡತೆ ಎಸಗಿರುವ ಬಗ್ಗೆ ಸಲ್ಲಿಸಿರುವ ದೂರಿನ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರುದಾರರ ಆಪಾದನೆ ಏನೆಂದರೆ, ಸ್ವತ್ತು ಸಂಖ್ಯೆ, 5ನೇ ಕ್ರಾಸ್ ಕಾರ್ನರ್, ಗೃಹಲಕ್ಷ್ಮಿ ಬಡಾವಣೆ, ಗಂಗೋಂಡನಹಳ್ಳಿ ಮುಖ್ಯ ರಸ್ತೆ, ಬೆಂಗಳೂರು, ವಾರ್ಡ್ ನಂ:41 (ಪೀಣ್ಯ ಕೈಗಾರಿಕಾ ವಲಯ), ಬೆಂಗಳೂರು ಇಲ್ಲಿ ಅನಧಿಕೃತವಾಗಿ ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ಸೆಟ್‌ಬ್ಯಾಕ್‌ಗಳನ್ನು ಬಿಡದೇ ಅನಧಿಕೃತ ತಳಪಾಯದ ಅಂತಸ್ತು ಮತ್ತು ಹೆಚ್ಚುವರಿ ಅಂತಸ್ತಿನ ಕಟ್ಟಡಗಳನ್ನು ಕಟ್ಟಿ ಬಿಬಿಎಂಪಿ., ಕಾಯ್ದೆಯ ನಿಯಮವನ್ನು ಉಲ್ಲಂಘಿಸಿರುತ್ತಾರೆ. ಈ ಬಗ್ಗೆ 1 ರಿಂದ 3ನೇ ಎದುರುದಾರರು ಯಾವುದೇ ಕ್ರಮ ಕೈಗೊಳ್ಳದೇ ಕಟ್ಟಡದ ಮಾಲೀಕರಿಂದ ಹಣ ಪಡೆದಿದ್ದು ಸುಮ್ಮನಿದ್ದಾರೆಂದು ಆಪಾದಿಸಿರುತ್ತಾರೆ.

3. ದೂರುದಾರರು ತಮ್ಮ ದೂರಿನೊಂದಿಗೆ, ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೀಡಿರುವ ದೂರಿನ ಪ್ರತಿ ಹಾಗೂ ಕಟ್ಟಡದ ಫೋಟೋ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

4. 1ನೇ ಎದುರುದಾರರು ತಮ್ಮ ದಿನಾಂಕ:13–1–2017 ರ ಆಕ್ಷೇಪಣೆ/ವರದಿಯಲ್ಲಿ ಹೇಳಿರುವ ಅಂಶಗಳೇನೆಂದರೆ, ಪ್ರಸ್ತುತ ದೂರು ಕಟ್ಟಡಕ್ಕೆ ಸಂಬಂಧಪಟ್ಟಂತೆ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಪ್ರಕಾಶ್ ಎಂ. ದಾರೇಶ್ವರ್ ರವರು ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ. ಕಾಯ್ದೆ, ಕಲಂ 462 ರಡಿಯಲ್ಲಿ ನೋಟಿಸನ್ನು ಜಾರಿಗೊಳಿಸಲು ಅನುಮೋದನೆಗಾಗಿ ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ ಕಛೇರಿಗೆ ಕಡತವನ್ನು ಮಂಡಿಸಿದ್ದು ಶ್ರೀಮತಿ ಬಿ.ಆರ್.ವಿದ್ಯಾ, ಡ್ರಾಫ್ಟ್‌ಮೆನ್ ರವರು ದಿನಾಂಕ:20–5–2017ರಂದು ವಿಭಾಗ ಕಛೇರಿಯ ಟಪಾಲಿನ ಪುಸ್ತಕದಲ್ಲಿ ಸದರಿ ಕಡತವನ್ನು ಸ್ವೀಕರಿಸಿರುತ್ತಾರೆ. ನಂತರ ಶ್ರೀಮತಿ ಬಿ.ಆರ್.ವಿದ್ಯಾರವರು ದಾಸರಹಳ್ಳಿ ವಿಭಾಗ ಕಛೇರಿಯಿಂದ ಸಹಾಯಕ ನಿರ್ದೇಶಕರು, ನಗರ ಯೋಜನೆ, ಪಶ್ಚಿಮ ಕಛೇರಿಗೆ ವರ್ಗಾವಣೆಗೊಂಡು ದಿನಾಂಕ:21–6–2017 ರಂದು ಬಿಡುಗಡೆ ಹೊಂದಿರುತ್ತಾರೆ. ನಂತರ ಶ್ರೀ ಡಿ.ಎಸ್.ಮಂಜುನಾಥ, ಪ್ರಭಾರ

ಡ್ರಾಫ್ಟ್‌ಮೆನ್ ಆಗಿ ಕಾರ್ಯನಿರ್ವಹಿಸುತ್ತಿದ್ದು ಅವರಿಗೆ ಶ್ರೀಮತಿ ಬಿ.ಆರ್.ವಿದ್ಯಾ ರವರು ಕಡತವನ್ನು ಹಸ್ತಾಂತರಿಸಿರುವುದಿಲ್ಲ. ದಿನಾಂಕ:26-8-2017 ರಂದು ಕರ್ನಾಟಕ ಲೋಕಾಯುಕ್ತರವರಿಂದ ಬಂದಂತಹ ಪತ್ರವನ್ನು ಪರಿಶೀಲಿಸಿದಾಗ, ವಿಳಂಬಕ್ಕೆ ಕಾರಣ ದಿನಾಂಕ:21-6-2017 ರಿಂದ ವಿಭಾಗ ಕಛೇರಿಯಲ್ಲಿ ಡ್ರಾಫ್ಟ್‌ಮೆನ್ ಇಂಜಿನೀಯರ್‌ಗಳಾಗಲೀ, ಸಹಾಯಕ ಅಭಿಯಂತರರಾಗಲೀ ಯಾರು ಪೂರ್ಣ ಪ್ರಮಾಣದಲ್ಲಿ ಇರುವುದಿಲ್ಲ. ಸರ್ಕಾರವು ಇಂದಿರಾ ಕ್ಯಾಂಟೀನ್ ಕಾಮಗಾರಿಗಳನ್ನು ದಿನಾಂಕ:16-8-2017 ರಂದು ಪೂರ್ಣಗೊಳಿಸಿ ಉದ್ಘಾಟಿಸಬೇಕೆಂದು ಆದೇಶಿಸಿದ್ದು ನಂತರ ಉಳಿಕೆ ಕ್ಯಾಂಟೀನ್ ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ವಿಳಂಬವಾಗಿರುತ್ತದೆ. ಆಗಸ್ಟ್ ಮಾಹೆಯಿಂದ ದಿನಾಂಕ:17-10-2017ರವರೆಗೆ ಪ್ರತಿದಿನ ಬೆಂಗಳೂರಿನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಸಾರ್ವಜನಿಕರಿಗೆ ಉಂಟಾದ ತೊಂದರೆಗಳನ್ನು ಸರಿಪಡಿಸಲು ಹೆಚ್ಚಿನ ಸಮಯ ವ್ಯಯವಾಗಿರುತ್ತದೆ. ಗೌರವಾನ್ವಿತ ಲೋಕಾಯುಕ್ತರವರು ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ ಪಾಲಿಕೆಯ ಅಧಿಕಾರಿಗಳ ಮೇಲೆ ದಿನಾಂಕ:23-10-2017 ರಂದು suo-moto ಪ್ರಕರಣ ದಾಖಲಿಸಿ ವರದಿ ಸಲ್ಲಿಸುವಂತೆ ದಿನಾಂಕ:10-11-2017 ರಂದು ದಿನ ನಿಗದಿಪಡಿಸಿದ್ದರಿಂದ ಕಛೇರಿಯ ಕೆಲಸ-ಕಾರ್ಯಗಳಲ್ಲಿ ಸ್ವಲ್ಪ ವಿಳಂಬವಾಗಿರುತ್ತದೆ ಎಂದು ಹೇಳಿಕೊಂಡಿರುತ್ತಾರೆ.

5. 1ನೇ ಎದುರುದಾರರು ತಮ್ಮ ಮುಂದುವರೆದ ವರದಿಯಲ್ಲಿ ಅಕ್ಟೋಬರ್ 2ನೇ ವಾರದಂದು ಮೂಲ ಕಡತವನ್ನು ಹಿಂದಿನ ಡ್ರಾಫ್ಟ್‌ಮೆನ್ ಶ್ರೀಮತಿ ಬಿ.ಆರ್. ವಿದ್ಯಾರವರು ಕಛೇರಿಗೆ ಹಿಂದಿರುಗಿಸಿದ್ದು ಕಟ್ಟಡದ ಮಾಲೀಕರಿಗೆ ನೀಡಲಾದ ನೋಟಿಸ್‌ಗಳನ್ನು ಪರಿಶೀಲಿಸಿ ಕೆ.ಎಂ.ಸಿ. ಕಾಯ್ದೆ, ಕಲಂ 462 ಅಂತಿಮ ನೋಟಿಸನ್ನು ತಯಾರಿಸಿ ಕಡತವನ್ನು ಮರುಸಲ್ಲಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶರವರಿಗೆ ಹಿಂದಿರುಗಿಸಲಾಗಿ ಅವರು ದಿನಾಂಕ:31-10-2017 ರಂದು 462 ಅಂತಿಮ ನೋಟಿಸನ್ನು ಸಿದ್ದಪಡಿಸಿ ತಮಗೆ ಕಳುಹಿಸಲಾಗಿ ಸದರಿ

ವಿಷಯವನ್ನು ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ಬಿಬಿಎಂಪಿ., ಬೆಂಗಳೂರು ರವರ ಗಮನಕ್ಕೆ ತಂದು ದಿನಾಂಕ:3-11-2017 ರಂದು ನೋಟಿಸ್ 462 ಅನ್ನು ಅನುಮೋದಿಸಿ ನೋಟಿಸಿನೊಂದಿಗೆ ಮೂಲ ಕಡತವನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರಿಗೆ ಈಗಾಗಲೇ ವರ್ಗಾಯಿಸಲಾಗಿರುತ್ತದೆ ಹಾಗೂ ಅನಧಿಕೃತ ಭಾಗಗಳನ್ನು ತೆರವುಗೊಳಿಸಲು ಆದೇಶಿಸಿರುವ ವಿಷಯವನ್ನು ಈ ಪ್ರಾಧಿಕಾರದ ಅವಗಾಹನೆಗೆ ತರುತ್ತಿರುವುದಾಗಿ ಹೇಳಿಕೊಂಡಿರುತ್ತಾರೆ.

6. 2ನೇ ಎದುರುದಾರರಾದ ಶ್ರೀ ಪ್ರಕಾಶ್ ಎಂ. ದಾರೇಶ್ವರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕ ಪ್ರದೇಶ, ಬಿಬಿಎಂಪಿ., ಬೆಂಗಳೂರು ರವರು ತಮ್ಮ ದಿನಾಂಕ:17-05-2017 ರ ಆಕ್ಷೇಪಣೆಯಲ್ಲಿ ದೂರು ಕಟ್ಟಡದ ನಿವೇಶನ ಸಂಖ್ಯೆ:391-ಸಿ, ವಾರ್ಡ್ ನಂ:41, ಗೃಹಲಕ್ಷ್ಮಿ ಬಡಾವಣೆ, ಗಂಗೋಂಡನಹಳ್ಳಿ ಮುಖ್ಯ ರಸ್ತೆ, ಬಿಬಿಎಂಪಿ., ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿರುವುದಕ್ಕೆ ಸಂಬಂಧಪಟ್ಟಂತಹ ಪ್ರಸ್ತುತ ದೂರಿನ ಬಗ್ಗೆ ಶ್ರೀ ವೆಂಕಟೇಶ್ ಪ್ರಭಾರ ಸಹಾಯಕ ಅಭಿಯಂತರರು ಪರಿವೀಕ್ಷಣೆ ಮಾಡಿ ಕಟ್ಟಡದ ಕಾಮಗಾರಿಯನ್ನು ಸ್ಥಗೀತಗೊಳಿಸುವಂತೆ ಸ್ಥಳದಲ್ಲಿ ಕ್ರಮವಹಿಸಿರುತ್ತಾರೆ. ಕಟ್ಟಡಕ್ಕೆ ಸಂಬಂಧಿಸಿದ ಮಂಜೂರಾದ ನಕ್ಷೆ ಹಾಗೂ ಇತರೆ ದಾಖಲೆಗಳನ್ನು ಒದಗಿಸಲು ಕೆ.ಎಂ.ಸಿ. ಕಾಯ್ದೆ, ಕಲಂ 308 ರಡಿಯಲ್ಲಿ ನೋಟಿಸ್ ನೀಡಲು ಅನುಮೋದನೆಗಾಗಿ ದಿನಾಂಕ:17-3-2017 ರಂದು ತಮ್ಮ ಮುಂದೆ ಮಂಡಿಸಿದ ಮೇರೆಗೆ ಕಡತದ ಟಿಪ್ಪಣಿಯನ್ನು ಪರಿಶೀಲಿಸಿ ನೋಟಿಸ್ ಜಾರಿ ಮಾಡಲು ಅದೇ ದಿನ ಆದೇಶ ಮಾಡಿರುವುದಾಗಿ ಹೇಳಿಕೊಂಡಿರುತ್ತಾರೆ.

7. ನಂತರ ಪ್ರಭಾರ ಸಹಾಯಕ ಅಭಿಯಂತರರಾದ ಶ್ರೀ ವೆಂಕಟೇಶ್ ರವರು ದಿನಾಂಕ:23-3-2017 ರಂದು ಕಡತ ಮಂಡಿಸಿ ಕಟ್ಟಡದ ಮಾಲೀಕರು ಮಂಜೂರಾತಿ

ನಕ್ಷೆ ಹಾಗೂ ಇತರೆ ದಾಖಲೆಗಳನ್ನು ಒದಗಿಸಿರುವುದಿಲ್ಲವೆಂದು ಅವರ ವಿರುದ್ಧ ಕೆ.ಎಂ.ಸಿ. ಕಾಯ್ದೆ, ಕಲಂ 321(1) ಮತ್ತು 321(2)ರನ್ವಯ ತಾತ್ಕಾಲಿಕ ಆದೇಶ ಹೊರಡಿಸಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ತಮ್ಮ ಮುಂದೆ ಮಂಡಿಸಿದ್ದರ ಮೇರೆಗೆ ಕೆ.ಎಂ.ಸಿ. ಕಾಯ್ದೆ, ಕಲಂ 321(1) ಮತ್ತು (2) ರನ್ವಯ ತಾತ್ಕಾಲಿಕ ಆದೇಶ ಹೊರಡಿಸಿಲು ಕ್ರಮವಹಿಸುವಂತೆ ಅದೇ ದಿವಸ ಆದೇಶ ಮಾಡಿರುವುದಾಗಿ ಹೇಳಿಕೊಂಡಿರುತ್ತಾರೆ.

8. ಪ್ರಭಾರ ಸಹಾಯಕ ಅಭಿಯಂತರರಾದ ಶ್ರೀ ವೆಂಕಟೇಶ್ ರವರು ದಿನಾಂಕ: 31-3-2017 ರಂದು ಕಡತ ಮಂಡಿಸಿ ಕಟ್ಟಡದ ಮಾಲೀಕರು ತಾತ್ಕಾಲಿಕ ಆದೇಶದ ಬಗ್ಗೆ ಯಾವುದೆ ಸಮಜಾಯಿಷಿ ಸಲ್ಲಿಸಿರುವುದಿಲ್ಲವೆಂದು ಕೆ.ಎಂ.ಸಿ. ಕಾಯ್ದೆ ಕಲಂ 321(3)ರನ್ವಯ ಸ್ಥಿರೀಕರಣ ಆದೇಶ ಹೊರಡಿಸಲು ಪ್ರಸ್ತಾವನೆಯನ್ನು ಅನುಮೋದನೆಗೆ ಮಂಡಿಸಿದ್ದರ ಮೇರೆಗೆ ಕಡತದ ಟಿಪ್ಪಣಿ ಪರಿಶೀಲಿಸಿ ಅದೇ ದಿನ ಸ್ಥಿರೀಕರಣ ಆದೇಶ ಹೊರಡಿಸಿರುವುದಾಗಿ ಹೇಳಿಕೊಂಡಿರುತ್ತಾರೆ.

9. ದಿನಾಂಕ:18-4-2017 ರಂದು ಪ್ರಭಾರ ಸಹಾಯಕ ಅಭಿಯಂತರರಾದ ಶ್ರೀ ವೆಂಕಟೇಶ್ ರವರು ಕಡತ ಮಂಡಿಸಿ ಕಟ್ಟಡದ ಮಾಲೀಕರು ತಾತ್ಕಾಲಿಕ ಆದೇಶ ಹಾಗೂ ಸ್ಥಿರೀಕರಣದ ಆದೇಶದ ಬಗ್ಗೆ ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಕೆ.ಎಂ.ಸಿ. ಕಾಯ್ದೆ, ಕಲಂ 462 ರಡಿಯಲ್ಲಿ ಆದೇಶ ಹೊರಡಿಸಲು ಕಡತವನ್ನು ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ.,ಬೆಂಗಳೂರು ರವರ ಅನುಮೋದನೆಗೆ ಕಳುಹಿಸಲು ಪ್ರಸ್ತಾವನೆಯನ್ನು ಮಂಡಿಸಿದ್ದರ ಮೇರೆಗೆ ಕಡತದ ಟಿಪ್ಪಣಿಯನ್ನು ಪರಿಶೀಲಿಸಿ ಮುಂದಿನ ಕ್ರಮಕ್ಕಾಗಿ ಕಡತವನ್ನು ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ., ಬೆಂಗಳೂರು ರವರಿಗೆ ಕಳುಹಿಸಲು ಅನುಮೋದನೆ ನೀಡಿರುವುದಾಗಿ ಹೇಳಿಕೊಂಡಿರುತ್ತಾರೆ.

10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ಉಪ–ವಿಭಾಗ ಆಗಿ ತಮ್ಮ ಕರ್ತವ್ಯಗಳನ್ನು ನಿಯಮಾನುಸಾರ ನಿರ್ವಹಿಸಿರುವುದಾಗಿ ಯಾವುದೇ ನಿರ್ಲಕ್ಷತೆ ಇರುವುದಿಲ್ಲ. ಕಟ್ಟಡವನ್ನು ತೆರವುಗೊಳಿಸಲು ಮತ್ತು ಕಾನೂನಿಗೆ ವ್ಯತಿರಿಕ್ತವಾಗಿ ನಿರ್ಮಾಣವಾಗಿರುವ ಕಟ್ಟಡದ ಭಾಗಗಳನ್ನು ಕೆಡವಿ ಹಾಕಲು ಕಾರ್ಯಪಾಲಕ ಅಭಿಯಂತರರಿಂದ ಅಗತ್ಯ ಅನುದಾನ ಮತ್ತು ಇತರೆ ನೆರವನ್ನು ಕೋರಿ ಮುಂದಿನ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳಲಾಗುವುದೆಂದು ಹೇಳಿಕೊಂಡಿರುತ್ತಾರೆ.

11. 3ನೇ ಎದುರುದಾರರಾದ ಶ್ರೀ ವೆಂಕಟೇಶ್, ಸಹಾಯಕ ಅಭಿಯಂತರರು ರವರು ತಮ್ಮ ದಿನಾಂಕ:17–5–2017 ರ ಆಕ್ಷೇಪಣೆಯಲ್ಲಿ ಪ್ರಸ್ತುತ ದೂರಿಗೆ ಸಂಬಂಧಪಟ್ಟ ನಿವೇಶನ ಸಂಖ್ಯೆ:391–ಸಿ ರಲ್ಲಿ ಅನಧಿಕೃತ ಕಟ್ಟಡ ನಿರ್ಮಿಸುತ್ತಿರುವುದನ್ನು ಪರಿವೀಕ್ಷಣೆ ಮಾಡಿ ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಸ್ಥಳದಲ್ಲಿ ಕ್ರಮ ವಹಿಸಿರುವುದಾಗಿ ಹೇಳಿರುತ್ತಾರೆ. ನಂತರ ಕೆ.ಎಂ.ಸಿ. ಕಾಯ್ದೆ ಕಲಂ 308 ರಡಿಯಲ್ಲಿ ನೋಟಿಸ್ ಜಾರಿ ಮಾಡಲು ಅನುಮೋದನೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮಂಡಿಸಿರುವುದಾಗಿ, ನಂತರ ಕಟ್ಟಡದ ಮಾಲೀಕರು ಯಾವುದೇ ಮಂಜೂರಾತಿ ನಕ್ಷೆ ಮತ್ತು ಇತರೆ ದಾಖಲೆಗಳನ್ನು ಒದಗಿಸಿರುವುದಿಲ್ಲವೆಂದು ಕಂಡುಬಂದಿದ್ದರಿಂದ ಕೆ.ಎಂ.ಸಿ. ಕಾಯ್ದೆ, ಕಲಂ 321(1), 321(2) ಮತ್ತು 321(3) ರಡಿಯಲ್ಲಿ ಆದೇಶಗಳನ್ನು ಹೊರಡಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರ ಅನುಮೋದನೆಗೆ ಮಂಡಿಸಿರುವುದಾಗಿ ನಂತರ ಕೆ.ಎಂ.ಸಿ ಕಾಯ್ದೆ, 462ರಡಿಯಲ್ಲಿ ಆದೇಶ ಹೊರಡಿಸಲು ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ., ಬೆಂಗಳೂರು ರವರಿಗೆ ಕಡತವನ್ನು ಕಳುಹಿಸಲು ಆದೇಶ ಕೋರಿ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕಡತವನ್ನು ಮಂಡಿಸಿರುವುದಾಗಿ ಹೇಳಿರುತ್ತಾರೆ.

12. ಈ ರೀತಿ ತಮ್ಮ ಕರ್ತವ್ಯವನ್ನು ಪ್ರಭಾರ ಸಹಾಯಕ ಅಭಿಯಂತರರಾಗಿ ನಿಯಮಾನುಸಾರ ನಿರ್ವಹಿಸಿರುವುದಾಗಿ ಹೇಳಿಕೊಂಡು ಯಾವುದೇ ನಿರ್ಲಕ್ಷ್ಯ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ.

13. 4ನೇ ಎದುರುದಾರರಾದ ಶ್ರೀ ಕೆ. ಪಿ. ನೀಲಕಂಠಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರವರು, ಪೀಣ್ಯ ಕೈಗಾರಿಕಾ ವಲಯ, ಬಿಬಿಎಂಪಿ.,ಬೆಂಗಳೂರು ರವರು ತಮ್ಮ ದಿನಾಂಕ:10-12-2018 ರ ವರದಿಯಲ್ಲಿ, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಕ್ರಮ ಕಟ್ಟಡವನ್ನು ತೆರವುಗೊಳಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ದಿನಾಂಕ: 08-12-2017 ರಂದು ಕಡತವನ್ನು ಸಲ್ಲಿಸಿರುತ್ತಾರೆಂದು ಹೇಳಿಕೊಂಡಿರುತ್ತಾರೆ. ಉಪ ಆಯುಕ್ತರು (ಆಡಳಿತ) ಬಿಬಿಎಂಪಿ., ಬೆಂಗಳೂರು ರವರ ದಿನಾಂಕ:30-8-2018 ರ ಕಛೇರಿ ಆದೇಶದ ಪ್ರತಿಯನ್ನು ಪರಿಶೀಲಿಸಿದಾಗ, 4ನೇ ಎದುರುದಾರರಾದ ಶ್ರೀ ಕೆ.ಪಿ. ನೀಲಕಂಠಯ್ಯ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಪೀಣ್ಯ ಕೈಗಾರಿಕಾ (ವಲಯ) ಉಪವಿಭಾಗದಲ್ಲಿ ದಿನಾಂಕ:30-8-2018 ರ ಆದೇಶದಂತೆ ಕರ್ತವ್ಯ ನಿರ್ವಹಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಇದನ್ನು ಪರಿಶೀಲಿಸಿದಾಗ, ಪ್ರಸ್ತುತ ದೂರನ್ನು ಈ ಪ್ರಾಧಿಕಾರಕ್ಕೆ ನೀಡುವ ಸಮಯದಲ್ಲಾಗಲೀ, ದೂರು ಕಟ್ಟಡದ ನಿರ್ಮಾಣದ ಸಮಯದಲ್ಲಾಗಲೀ ಕೆ.ಎಂ.ಸಿ. ಕಾಯ್ದೆ, ಕಲಂ 308 ರಡಿಯಲ್ಲಿ ನೋಟಿಸ್ ಹಾಗೂ ಕೆ.ಎಂ.ಸಿ. ಕಾಯ್ದೆ, 321(1), 321(2) ಮತ್ತು 321(3) ಮತ್ತು 462 ರಡಿಯಲ್ಲಿ ಆದೇಶ ಹೊರಡಿಸುವ ಸಮಯದಲ್ಲಾಗಲೀ 4ನೇ ಎದುರುದಾರರು ದೂರು ಕಟ್ಟಡದ ವ್ಯಾಪ್ತಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದುದ್ದು ಕಂಡುಬರುವುದಿಲ್ಲ. ಮೇಲಾಗಿ, 4ನೇ ಎದುರುದಾರರಿಗೆ ಈ ಪ್ರಕರಣದ ವಿಚಾರಣೆಯಲ್ಲಿ ಪ್ರಸ್ತುತ ದೂರು ಸಲ್ಲಿಸಿದ ನಂತರ

ದಿನಾಂಕ:3-11-2018 ರ ಗೌರವಾನ್ವಿತರ ಕಂಡಿಕೆ-49 ರ ಆದೇಶದಂತೆ 4ನೇ ಎದುರುದಾರರನ್ನಾಗಿ ಹೆಚ್ಚುವರಿಯಾಗಿ ಸೇರಿಸಿರುವುದು ಕಂಡುಬರುತ್ತದೆ.

14. ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರುದಾರರ ದೂರಿನ ಹಾಗೂ ದಾಖಲೆಗಳ ಅಂಶಗಳು ಮತ್ತು ಎದುರದಾರರ ಆಕ್ಷೇಪಣೆ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರಸ್ತುತ ಪ್ರಕರಣವನ್ನು 5ನೇ ಕ್ರಾಸ್ ಕಾರ್ನರ್, ಗೃಹಲಕ್ಷ್ಮಿ ಲೇಔಟ್, ಗಂಗೋಂಡನಹಳ್ಳಿ ಮುಖ್ಯ ರಸ್ತೆ, ವಾರ್ಡ್ ನಂ:41 (ಪೀಣ್ಯ ಕೈಗಾರಿಕಾ ವಲಯ), ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ಕಟ್ಟಡದ ಮಾಲೀಕರು ಯಾವುದೇ ನಿಯಮಗಳನ್ನು ಪಾಲಿಸದೇ ಮಂಜೂರಾತಿ ನಕ್ಷೆ ಹಾಗೂ ಕೆ.ಎಂ.ಸಿ. ಕಾಯ್ದೆ, ನಿಯಮಗಳನ್ನು ಉಲ್ಲಂಘಿಸಿ ಸೆಟ್‌ಬ್ಯಾಕ್ ಬಿಡದೇ ನೆಲಮಹಡಿ ಮತ್ತು ಹೆಚ್ಚುವರಿ ಅಂತಸ್ತುಗಳ ಕಟ್ಟಡಗಳನ್ನು ಕಟ್ಟುತ್ತಿದ್ದರೂ ಸಹ ಎದುರುದಾರರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲವೆಂದು ಆಪಾದಿಸಿ ಮೊದಲಿಗೆ 1 ರಿಂದ 3ನೇ ಎದುರುದಾರರ ವಿರುದ್ಧ ಮಾತ್ರ ದೂರನ್ನು ಸಲ್ಲಿಸಿರುತ್ತಾರೆ.

15. ಪ್ರಸ್ತುತ ದೂರನ್ನು ದೂರುದಾರರು ದಿನಾಂಕ:15-3-2017 ರಂದು ಈ ಪ್ರಾಧಿಕಾರದ ಮುಂದೆ ಸಲ್ಲಿಸಿರುತ್ತಾರೆ. ತಮ್ಮ ದೂರಿನೊಂದಿಗೆ ದೂರುದಾರರು ಹಾಜರುಪಡಿಸಿರುವ ದಿನಾಂಕ:24-12-2016 ರ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೀಡಿದ ದೂರನ್ನು ಪರಿಶೀಲಿಸಿದಾಗ, ಪ್ರಸ್ತುತ ದೂರುದಾರರು ಈ ಪ್ರಾಧಿಕಾರದ ಮುಂದೆ ದೂರನ್ನು ಸಲ್ಲಿಸುವ ಮುಂಚೆ ಅನಧಿಕೃತ ಕಟ್ಟಡದ ಬಗ್ಗೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ದೂರು ನೀಡಿರುವುದು ಕಂಡುಬರುತ್ತದೆ.

16. 1 ರಿಂದ 3ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ, ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗದ ವಾರ್ಡ್ ನಂ:41 ರ ವ್ಯಾಪ್ತಿಯಲ್ಲಿನ

ಗೃಹಲಕ್ಷ್ಮಿ ಬಡಾವಣೆ, ಗಂಗೋಂಡನಹಳ್ಳಿ ಮುಖ್ಯ ರಸ್ತೆ, ಸ್ವತ್ತು ಸಂಖ್ಯೆ:391–ಸಿ ರಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿದಿದ್ದು ಕಂಡುಬರುತ್ತದೆ.

17. ತಾವು ದೂರು ಕಟ್ಟಡದ ಸಮಯದಲ್ಲಿ ದೂರು ಕಟ್ಟಡದ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ ಎನ್ನುವುದು ಕಾರ್ಯಪಾಲಕ ಅಭಿಯಂತರರಾದ 1ನೇ ಎದುರುದಾರ ಶ್ರೀ ಶೇಷಾದ್ರಿ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ 2ನೇ ಎದುರುದಾರ ಶ್ರೀ ಪ್ರಕಾಶ್ ಹಾಗೂ ಸಹಾಯಕ ಅಭಿಯಂತರರಾದ 3ನೇ ಎದುರುದಾರ ಶ್ರೀ ವೆಂಕಟೇಶ್ ರವರ ಪ್ರತಿಪಾದನೆ ಆಗಿರುವುದಿಲ್ಲ. ಆದರೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರಾದ 2 ಮತ್ತು 3ನೇ ಎದುರುದಾರರ ಪ್ರಕಾರ ತಾವು ಕಟ್ಟಡದ ಸ್ಥಳವನ್ನು ಪರಿಶೀಲಿಸಿ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ. ಕಾಯ್ದೆ, ಕಲಂ 308 ರಡಿಯಲ್ಲಿ ನೋಟಿಸ್ ನೀಡಿ ನಂತರ ದಾಖಲೆಗಳನ್ನು ಕಟ್ಟಡದ ಮಾಲೀಕರು ಹಾಜರುಪಡಿಸದ ಕಾರಣ ಕೆ.ಎಂ.ಸಿ. ಕಾಯ್ದೆ, ಕಲಂ 321(1), 321(2) ರಡಿಯಲ್ಲಿ ತಾತ್ಕಾಲಿಕ ಆದೇಶ ಮತ್ತು 321(3) ರಡಿಯಲ್ಲಿ ಸ್ಥಿರೀಕರಣ ಆದೇಶ ಹೊರಡಿಸಿ ಆದಾದನಂತರ ಕೆ.ಎಂ.ಸಿ. ಕಾಯ್ದೆ, 462 ರಡಿಯಲ್ಲಿ ಆದೇಶಕ್ಕಾಗಿ ಕಡತವನ್ನು ಕಾರ್ಯಪಾಲಕ ಅಭಿಯಂತರರಿಗೆ ಕಳುಹಿಸಿ ತಮ್ಮ ಕರ್ತವ್ಯವನ್ನು ಯಾವುದೇ ನಿರ್ಲಕ್ಷ್ಯತನ ಇಲ್ಲದೇ ನಿರ್ವಹಿಸಿರುವುದು ಆಗಿರುತ್ತದೆ. ಇನ್ನೂಳಿದಂತೆ 1ನೇ ಎದುರುದಾರರ ಪ್ರಕಾರ ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ಕಡತವನ್ನು ಪಡೆದ ನಂತರ ಕೆ.ಎಂ.ಸಿ. ಕಾಯ್ದೆ, ಕಲಂ 462 ರಡಿಯಲ್ಲಿ ಆದೇಶ ಹೊರಡಿಸಿ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಅಂದಾಜುಪಟ್ಟಿಯನ್ನು ಮೇಲಾಧಿಕಾರಿಯವರಿಗೆ ಕಳುಹಿಸಿ ತಮ್ಮ ಕರ್ತವ್ಯ ನಿರ್ವಹಿಸಿರುವುದು ಇರುತ್ತದೆ.

18. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಅಕ್ರಮ ಕಟ್ಟಡಕ್ಕೆ ಸಂಬಂಧಪಟ್ಟಂತೆ ಅಕ್ರಮ ಕಟ್ಟಡದ ಸಂದರ್ಭದಲ್ಲಿ ಕೇವಲ ಕೆ.ಎಂ.ಸಿ. ಕಾಯ್ದೆ ಕಲಂ 308 ರಡಿಯಲ್ಲಿ ನೋಟಿಸ್ ನೀಡುವುದು ಹಾಗೂ ಕೆ.ಎಂ.ಸಿ. ಕಾಯ್ದೆ, ಕಲಂ 321(1), 321(2) ಮತ್ತು 321(3) ಹಾಗೂ 462 ರಡಿಯಲ್ಲಿ ಆದೇಶ ಹೊರಡಿಸುವುದು ಮಾತ್ರ ಸಂಬಂಧಪಟ್ಟ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರ ಕರ್ತವ್ಯವಾಗಿದೆಯೇ ಎನ್ನುವುದನ್ನು ಪರಿಗಣಿಸುವುದು ಅವಶ್ಯಕವೆನಿಸುತ್ತದೆ. ಈ ಹಿನ್ನಲೆಯಲ್ಲಿ ಬಿಬಿಎಂಪಿ, ಆಯುಕ್ತರವರ ಕಛೇರಿಯ ಸಂಬಂಧಪಟ್ಟ ಸುತ್ತೋಲೆ ಹಾಗೂ ಕಛೇರಿ ಆದೇಶವನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಬಿಬಿಎಂಪಿ., ಆಯುಕ್ತರವರು ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಷನ್ ಆಕ್ಟ್, 1976 ರ ಕಲಂ 67 ರಲ್ಲಿ ನಿಹಿತವಾದ ಅಧಿಕಾರವನ್ನು ಬಳಸಿ ದಿನಾಂಕ:7-8-2015 ರಂದು ಹೊರಡಿಸಿರುವ ಕಂಡಿಕೆ-3 ಮತ್ತು 4 ರ ಸುತ್ತೋಲೆ ಈ ಕೆಳಕಂಡಂತೆ ಇರುತ್ತದೆ.

> "ಪಾಲಿಕೆಯು ಎಲ್ಲಾ ರೀತಿಯಲ್ಲಿಯೂ ಕ್ರಮ ಜರುಗಿಸುತ್ತಿರುವಾಗಲೂ ಕೂಡ ಅನಧಿಕೃತ/ನಕ್ಷೆ ಮಂಜೂರಾತಿ ಉಲ್ಲಂಘನೆ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸಲು ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.
>
> ಈ ಹಿನ್ನಲೆಯಲ್ಲಿ ಕೆಳಕಂಡ ಮೂರು ಕ್ರಮಗಳನ್ನು ಇಂತಹ ಎಲ್ಲಾ ಪ್ರಕರಣಗಳಲ್ಲಿ ತೆಗೆದುಕೊಳ್ಳಲು ಉಪ ವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ ಸೂಚಿಸಿದೆ. ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡಗಳ ತಳಪಾಯ ತೋಡುವ ಹಂತದಿಂದಲೂ ಕಟ್ಟಡಗಳ ನಿರ್ಮಾಣದ ಬಗ್ಗೆ

ಗಮನಹರಿಸಿ, ಕಾಲಕಾಲಕ್ಕೆ ಕಟ್ಟಡದ ಹಂತಗಳ ಬಗ್ಗೆ ಕಛೇರಿ ಕಡತದಲ್ಲಿ ನಮೂದಿಸತಕ್ಕದ್ದು.

ಕ್ರಮ 1:. . . . . . . . . .

19. ಬಿಬಿಎಂಪಿ., ಆಯುಕ್ತರವರ ದಿನಾಂಕ:29-06-2015 ರ ಕಛೇರಿ ಆದೇಶ ಈ ಕೆಳಕಂಡಂತೆ ಇರುತ್ತದೆ.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ/ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಪರಿವೀಕ್ಷಿಸಿ, ವ್ಯತಿರಿಕ್ತ ನಿರ್ಮಾಣ ಕಂಡುಬಂದಲ್ಲಿ ಕ್ರಮವಹಿಸುವ ಅಧಿಕಾರ ಪ್ರತ್ಯಾಯೋಜನೆಯ ಉಲ್ಲೇಖದ ಕಛೇರಿ ಆದೇಶ ಹಾಗೂ ಹಿಂದಿನ ಎಲ್ಲಾ ಸುತ್ತೋಲೆ/ಕಛೇರಿ ಆದೇಶಗಳನ್ನು ರದ್ದುಪಡಿಸಲಾಗಿದೆ. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ 28 ವಿಭಾಗಗಳ ಕಾರ್ಯನಿರ್ವಾಹಕ ಅಭಿಯಂತರರುಗಳು ಮತ್ತು 64 ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳು ಕಾರ್ಯನಿರ್ವಹಿಸುವ ವಿಭಾಗ/ಉಪವಿಭಾಗದ ವ್ಯಾಪ್ತಿಯಲ್ಲಿ, ಮಂಜೂರಾತಿ ಪಡೆದು ನಿರ್ಮಿಸುತ್ತಿರುವ ಕಟ್ಟಡಗಳನ್ನು ಪರಿವೀಕ್ಷಿಸಿ, ಮಂಜೂರಾತಿ ನಕ್ಷೆಗೆ ವ್ಯತಿರಿಕ್ತ ನಿರ್ಮಾಣ ಅಥವಾ ಅನಧಿಕೃತ ನಿರ್ಮಾಣ ಕಂಡುಬಂದಲ್ಲಿ ಕೆ.ಎಂ.ಸಿ. ಕಾಯ್ದೆ, 1976 ರ ಸೆಕ್ಷನ್ 321(1) ರಂತೆ ತಾತ್ಕಾಲಿಕ ಆದೇಶ, 321(2) ರಂತೆ ಕಾರಣ ಕೇಳಿ ಪತ್ರ ಮತ್ತು 321(3) ರಂತೆ ಸ್ಥಿರೀಕರಣ ಆದೇಶ ಹೊರಡಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ

ಹಾಗೂ ಸೆಕ್ಷನ್ 462 ರಂತೆ ವ್ಯತಿರಿಕ್ತ ನಿರ್ಮಾಣ ಅಥವಾ ಅನಧಿಕೃತ ನಿರ್ಮಾಣ ತೆರವುಗೊಳಿಸುವ ಆದೇಶ ಹೊರಡಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಪ್ರತ್ಯೋಯೋಜನೆಯನ್ನು ನೀಡಿ ಆದೇಶಿಸಲಾಗಿದೆ."

20. ಮೇಲ್ಕಂಡ ಬಿಬಿಎಂಪಿ., ಆಯುಕ್ತರವರ ಸುತ್ತೋಲೆ ಹಾಗೂ ಕಛೇರಿಯ ಆದೇಶವನ್ನು ಪರಿಶೀಲಿಸಿದಾಗ, ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡಗಳ ತಳಪಾಯ ತೋಡುವ ಹಂತದಿಂದಲೂ ಕಟ್ಟಡ ನಿರ್ಮಾಣದ ಬಗ್ಗೆ ಗಮನಹರಿಸಿ ವ್ಯತಿರಿಕ್ತ ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಪರಿವೀಕ್ಷಿಸಿ ವ್ಯತಿರಿಕ್ತ ನಿರ್ಮಾಣ ಕಂಡುಬಂದಲ್ಲಿ ಕ್ರಮವಹಿಸುವ ಅಧಿಕಾರ ಹೊಂದಿರುವುದು ಹಾಗೂ ಅನಧಿಕೃತ ನಿರ್ಮಾಣ ತೆರವುಗೊಳಿಸುವ ಆದೇಶ ಹೊರಡಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಅಭಿಯಂತರರು ಹೊಂದಿರುತ್ತಾರೆ.

21. ಎದುರುದಾರರು ಹಾಜರುಪಡಿಸಿರುವ ದಿನಾಂಕ:17-3-2017 ರ ಕೆ.ಎಂ.ಸಿ. ಕಾಯ್ದೆ ಕಲಂ 308 ರಡಿಯಲ್ಲಿನ ನೋಟಿಸ್ ಪ್ರತಿಯನ್ನು ಪರಿಶೀಲಿಸಿದಾಗ ಸಹಾಯಕ ಕಾರ್ಯಪಾಲಕ ಅಭಿಯಂತರರಾದ 2ನೇ ಎದುರುದಾರರು ಕಟ್ಟಡದ ಮಾಲೀಕರಿಗೆ ಕಟ್ಟಡದ ಮಂಜೂರಾತಿ ನಕ್ಷೆ, ಬಡಾವಣೆಯ ಅನುಮೋದಿತ ನಕ್ಷೆ ಮತ್ತು ಪ್ರಾರಂಭಿಕ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಸೂಚಿಸಿ ನೋಟಿಸ್ ನೀಡಿರುವುದು ಕಂಡುಬರುತ್ತದೆ. ದಿನಾಂಕ:23-3-2017 ರ ಕೆ.ಎಂ.ಸಿ. ಕಾಯ್ದೆ, ಕಲಂ 321(1) ಮತ್ತು 321(2) ರ ತಾತ್ಕಾಲಿಕ ಆದೇಶವನ್ನು ಪರಿಶೀಲಿಸಿದಾಗ, ಸದರಿ ಆದೇಶವನ್ನು 2ನೇ ಎದುರುದಾರರಾದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು 3ನೇ ಎದುರುದಾರರಾದ ಸಹಾಯಕ ಅಭಿಯಂತರರು ಹೊರಡಿಸಿರುವುದು ಕಂಡುಬರುತ್ತದೆ. ಸದರಿ ತಾತ್ಕಾಲಿಕ ಆದೇಶದಲ್ಲಿ ವ್ಯತಿರಿಕ್ತ ನಿರ್ಮಾಣದ ಶೇಕಡವಾರು ಪ್ರಮಾಣವು ಎಲ್ಲಾ

ಅಂತಸ್ತುಗಳಲ್ಲಿ ಶೇಕಡ 100% ಇರುವುದನ್ನು ಉಲ್ಲೇಖಿಸಿ ಆದೇಶ ಹೊರಡಿಸಿರುವುದು ಕಂಡುಬರುತ್ತದೆ.

22. ದಿನಾಂಕ:31-3-2017 ರ ಕೆ.ಎಂ.ಸಿ. ಕಾಯ್ದೆ ಕಲಂ 321(3) ರಡಿಯಲ್ಲಿ ಸ್ಥಿರೀಕರಣ ಆದೇಶವನ್ನು ಪರಿಶೀಲಿಸಿದಾಗ, ಸದರಿ ಆದೇಶವನ್ನು 2 ಮತ್ತು 3ನೇ ಎದುರುದಾರರು ಹೊರಡಿಸಿರುವುದು ಕಂಡುಬರುತ್ತದೆ. ಇನ್ನೂಳಿದಂತೆ, ದಿನಾಂಕ: 3-11-2017ರ ಕೆ.ಎಂ.ಸಿ. ಕಾಯ್ದೆ, ಕಲಂ 462 ರಡಿಯಲ್ಲಿನ ಆದೇಶವನ್ನು ಕಾರ್ಯಪಾಲಕ ಅಭಿಯಂತರರು/1ನೇ ಎದುರುದಾರರು ಹೊರಡಿಸಿರುವುದು ಕಂಡುಬರುತ್ತದೆ.

23. ಈಗಾಗಲೇ ಮೇಲೆ ಚರ್ಚಿಸಿರುವಂತೆ ಪ್ರಸ್ತುತ ದೂರನ್ನು ದೂರುದಾರರು ಈ ಪ್ರಾಧಿಕಾರಕ್ಕೆ ಸಲ್ಲಿಸುವ ಸಮಯದಲ್ಲಾಗಲೀ ಅಥವಾ ಅದಕ್ಕಿಂತ ಮೊದಲು ದೂರುದಾರರು ದಿನಾಂಕ:24-12-2016 ರ ದೂರನ್ನು ದೂರು ಕಟ್ಟಡದ ಅನಧಿಕೃತ ಕಟ್ಟಡದ ಕಟ್ಟಡಕ್ಕೆ ಸಂಬಂಧಪಟ್ಟಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ 2ನೇ ಎದುದಾರರಿಗೆ ದೂರು ನೀಡುವ ಸಮಯದಲ್ಲಾಗಲೀ ತಾವು ದೂರು ಕಟ್ಟಡದ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಮತ್ತು ಸಹಾಯಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಎನ್ನುವುದಾಗಲೀ ಅಥವಾ ತಾವು ದೂರು ಕಟ್ಟಡದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದೂರು ಕಟ್ಟಡದ ನಿರ್ಮಾಣ ಆರಂಭವಾಗಿರುವುದಿಲ್ಲ ಅಥವಾ ಕಟ್ಟುತ್ತಿರಲಿಲ್ಲ ಎಂಬುದು 1 ರಿಂದ 3ನೇ ಎದುರುದಾರರ ಪ್ರತಿಪಾದನೆಯೇ ಆಗಿರುವುದಿಲ್ಲ ಹಾಗೂ ಈ ಅಂಶಗಳ ಬಗ್ಗೆ 1 ರಿಂದ 3ನೇ ಎದುರುದಾರರು ಯಾವುದೇ ವಿವರಣೆಯನ್ನು ಸಹ ನೀಡಿರುವುದಿಲ್ಲ.

24. ಈ ಕಾರಣದಿಂದ ದೂರು ಕಟ್ಟಡದ ತಳಪಾಯ ತೋಡುವ ಹಂತದಿಂದಲೇ ಸ್ಥಳವನ್ನು ಪರಿವೀಕ್ಷಿಸಿ ಅಕ್ರಮ/ಅನಧಿಕೃತ ಕಟ್ಟಡವನ್ನು ಮುಂದುವರೆಯದಂತೆ ತಡೆಯದೇ ಶೇಕಡ 100% ಪ್ರಮಾಣದ ಕಟ್ಟಡದ ಉಲ್ಲಂಘನೆ ಎಲ್ಲಾ ಅಂತಸ್ತಿನ ಕಟ್ಟಡದಲ್ಲಿ ಆಗುವವರೆಗೂ ತಡೆಯಲು ಯಾವುದೇ ಕ್ರಮ ಕೈಗೊಳ್ಳದೇ ಕೇವಲ ಕೆ.ಎಂ.ಸಿ. ಕಾಯ್ದೆ, ಕಲಂ 308 ರಡಿಯಲ್ಲಿ ನೋಟಿಸ್ ನೀಡಿ ಕೆ.ಎಂ.ಸಿ. ಕಾಯ್ದೆ, ಕಲಂ 321(1), 321(2), 321(3) ಮತ್ತು 462 ರಂತೆ ಆದೇಶ ಹೊರಡಿಸಿ ಕರ್ತವ್ಯಪಾಲನೆ ಮಾಡಿದ್ದೇವೆ ಎನ್ನುವ 1 ರಿಂದ 3ನೇ ಎದುರುದಾರರ ಪ್ರತಿಪಾದನೆಯನ್ನು ಈ ಹಂತದಲ್ಲಿ ಒಪ್ಪಿಕೊಳ್ಳಲು ಆಗುವುದಿಲ್ಲ.

25. ಈಗಾಗಲೇ ಮೇಲೆ ಚರ್ಚಿಸಿರುವಂತೆ 4ನೇ ಎದುರುದಾರರಾದ ಶ್ರೀ ನೀಲಕಂಠಯ್ಯ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ವಲಯ, ಬಿಬಿಎಂಪಿ, ಬೆಂಗಳೂರು ಆಗಿ ಮಾನ್ಯ ಆಯುಕ್ತರವರ ದಿನಾಂಕ:30-08-2018 ರ ಕಛೇರಿ ಆದೇಶದಂತೆ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಕಟ್ಟಡದ ಸಮಯದಲ್ಲಿ ಅಥವಾ ಅನಧಿಕೃತ ಕಟ್ಟಡಕ್ಕೆ ಸಂಬಂಧಪಟ್ಟಂತೆ ನೋಟಿಸ್ ಹಾಗೂ ತಾತ್ಕಾಲಿಕ ಮತ್ತು ಸ್ಥಿರೀಕರಣ ಆದೇಶ ಹೊರಡಿಸುವ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲದಿದ್ದ ಕಾರಣ ಸದರಿಯವರ ವಿರುದ್ದ ಕ್ರಮ ಜರುಗಿಸಲು ಸಾಧ್ಯವಾಗದೇ ಇರುವುದರಿಂದ ಸದರಿಯವರನ್ನು ಪ್ರಕರಣದಿಂದ ಕೈಬಿಡಬಹುದಾಗಿದೆ

26. ಮೇಲೆ ವಿವರಿಸಿದ ಕಾರಣಗಳಿಂದಾಗ, 1 ರಿಂದ 3ನೇ ಎದುರುದಾರರಾದ (1) ಶ್ರೀ ಶೇಷಾದ್ರಿ, ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಪಿ., ಬೆಂಗಳೂರು, (2) ಶ್ರೀ ಪ್ರಕಾಶ್ ಎಂ. ದಾರೇಶ್ವರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ಮತ್ತು (3) ಶ್ರೀ ವೆಂಕಟೇಶ್, ಸಹಾಯಕ ಅಭಿಯಂತರರು, ವಾರ್ಡ್ ನಂ:41, ಪೀಣ್ಯ ಕೈಗಾರಿಕಾ ವಿಭಾಗ, ಬಿಬಿಎಂಪಿ.ಬೆಂಗಳೂರು ರವರ ಕೃತ್ಯವು ಕರ್ನಾಟಕ ನಾಗರೀಕ

ಸೇವಾ (ನಡತೆ)ನಿಯಮ, 2021 ರ ಕಲಂ 3 (I) (i), (ii) & (iii) [ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966] ರಂತೆ ದುರ್ನಡತೆಯಾಗಿರುತ್ತದೆ ಎಂಬುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿ ಎದುರುದಾರರ ವಿರುದ್ಧ ಕ.ಸ.ಸೇ.ನಿ ಗಳ ಅಡಿಯಲ್ಲಿ ಶಿಸ್ತು ಕ್ರಮವನ್ನು ಶಿಸ್ತು ಪ್ರಾಧಿಕಾರದ ಮೂಲಕ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

27. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

4/5/22

**[ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ]**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.